**<u>ಕೃಪಾ ಸಂಪೂರ್ಣ ಓ ದೇವಾ</u>**

ಕೃಪಾ ಸಂಪೂರ್ಣ ಓ ದೇವಾ
ಸ್ತುತಿಗೆ ಯೋಗ್ಯನು ನೀನೇ,
ಪೂರ್ಣ ಹೃದಯ ದಿಂದಲೇ ನಿನ್ನ
ಬೇಡುವೆ ಎನ್ ಕರ್ತನೆ.

ಈ ಜೀವ ಯಾತ್ರೆಯೊಳು
ನೀ ಮಾತ್ರ ಸಾಕೆನಗೆ
ಎಲ್ಲೆಲ್ಲಿ ನಾ ಹೋದರು
ಪ್ರೀತಿಯಿಂ ಸಂರಕ್ಷಿಸು

ಯಾರಲ್ಲೂ ಕಾಣೇನು ನಾ
ಆತ್ಮೀಯ ಆಶ್ರಯವ
ನೀ ನೀಡುವ ಆನಂದವ
ಈ ಲೋಕ ನೀಡದೆಂದು

ಆಲೈಸು ಓ ಕರ್ತನೆ
ಈ ಬಡ ಪ್ರಾರ್ಥನೆಯ
ಪವಿತ್ರ ಐಕ್ಯದೊಳು
ನಮ್ಮನ್ನು ಕಾಪಾಡು ನೀ